"ನೀರು ಉಳಿಸಿ – ಬೆಂಗಳೂರು ಉಳಿಸಿ"

ವೆಬ್ ಸೈಟ್:WWW. bwssb.gov.in
ಇ-ಮೇಲ್:cao-s@bwssb.gov.in

ದೂರವಾಣಿ: 080-22945102
ಫ್ಯಾಕ್ಸ್ : 080-22945102

# ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ
# BANGALORE WATER SUPPLY AND SEWERAGE BOARD
**1ನೇ ಮಹಡಿ, ಕಾವೇರಿ ಭವನ, ಬೆಂಗಳೂರು -560 009**

ನಂ.ಬೆಂಜಮಂ/ಮು.ಆ.ಅ-ಕಾ-109/259/997/2019-20 ದಿ: 04.02.2020

ಕಾರ್ಯನಿವಾಹಕ ನಿರ್ವಾಹಕ ಅಭಿಯಂತರರು(ಎಂ.ಐ.ಎಸ್&ಐ.ಟಿ)
7ನೇ ಮಹಡಿ, ಕಾವೇರಿ ಭವನ,
ಬೆಂಗಳೂರು ಜಲಮಂಡಳಿ,
ಬೆಂಗಳೂರು.

**ವಿಷಯ: ನೀರಿನ ಸಂರಕ್ಷಣೆ, ಮಳೆ ನೀರು ಕೊಯ್ಲು ಅಳವಡಿಕೆ, ಸಂಸ್ಕರಿಸಿದ ತ್ಯಾಜ್ಯ ನೀರಿನ ಪುನರ್ ಬಳಕೆ ಹಾಗೂ ನೀರು ಸರಬರಾಜು ಮತ್ತು ಒಳಚರಂಡಿ ನಿರ್ವಹಣೆಯ ಸಮಸ್ಯೆಯ ಬಗ್ಗೆ ಮನೆ ಮನೆಗಳಿಗೆ ತೆರಳ ಅರಿವು ಮೂಡಿಸಲು ಮಂಡಳಿಯಲ್ಲಿ ಸ್ವಯಂಸೇವಕರಾಗಿ "ಜಲಸೇನಾನಿ" ಯಾಗಿ ನೇಮಕ ಮಾಡಿಕೊಳ್ಳುವ ಕುರಿತ ಮಾಹಿತಿಯನ್ನು** ಮಂಡಳಿಯ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡುವ ಕುರಿತು.

*****

ಬೆಂಗಳೂರು ಜಲಮಂಡಳಿಯು ನಗರಕ್ಕೆ ಪ್ರತಿ ದಿನ ಸರಾಸರಿ 1450 ಎಂ.ಎಲ್.ಡಿ.. ಯಷ್ಟು ನೀರು ಸರಬರಾಜು ಮಾಡುತ್ತಿದ್ದು, ಇದರಿಂದ ಉತ್ಪತ್ತಿಯಾಗುವ ತ್ಯಾಜ್ಯ ನೀರನ್ನು ಸಾಗಿಸುವ ಮತ್ತು ಶುದ್ಧೀಕರಿಸುವ ಕಾರ್ಯವನ್ನು ನಿರ್ವಹಿಸುತ್ತಿದೆ. ಪ್ರಸ್ತುತ 9.8 ದಶ ಲಕ್ಷ ಕಟ್ಟಡಗಳಿಗೆ ಜಲಮಾಪನವನ್ನು ಅಳಡಿಸಲಾಗಿರುತ್ತದೆ. ಬೆಂಗಳೂರಿನಾದ್ಯಂತ ಕಿಯೋಸ್ಕ್ ಯಂತ್ರಗಳು ಹಾಗೂ ಆನ್‌ಲೈನ್ ಮುಖಾಂತರ ನೀರು ಮತ್ತು ಒಳಚರಂಡಿ ಬಿಲ್‌ಅನ್ನು ಪಾವತಿಸಲು ವ್ಯವಸ್ಥೆ ಕಲ್ಪಿಸಲಾಗಿದೆ.

ಮುಂದುವರೆದಂತೆ ಜನಸ್ನೇಹಿ ಕಾರ್ಯಕ್ರಮಗಳನ್ನು ಹಾಗೂ ಸಾರ್ವಜನಿಕರಿಗೆ ಮಂಡಳಿಯ ಕಾರ್ಯಚಟುವಟಿಕೆಗಳಾದ ನೀರು ಸರಬರಾಜು ಮತ್ತು ಒಳಚರಂಡಿ ನಿರ್ವಹಣೆಯ ಹಾಗೂ ನೀರಿನ ಸಂರಕ್ಷಣೆ, ಮಳೆನೀರು ಕೊಯ್ಲು ಅಳವಡಿಕೆ, ಸಂಸ್ಕರಿಸಿದ ತ್ಯಾಜ್ಯ ನೀರಿನ ಪುನರ್ ಬಳಕೆಯ ಬಗ್ಗೆ ಮನೆ ಮನೆಗಳಿಗೆ ತೆರಳ ಮಾಹಿತಿ ಒದಗಿಸುವುದು ಅತ್ಯಗತ್ಯವಾಗಿದೆ.

ಸಾರ್ವಜನಿಕರಿಂದ ನೀರಿನ ಸೋರುವಿಕೆ ಮತ್ತು ಒಳಚರಂಡಿ ಸಮಸ್ಯೆಯ ಬಗ್ಗೆ ಮಾಹಿತಿ ಪಡೆದುಕೊಳ್ಳುವುದು ಹಾಗೂ ಆ ಪ್ರದೇಶಗಳಲ್ಲಿನ ಅನಧಿಕೃತ ನೀರಿನ ಸಂಪರ್ಕಗಳ ವಿವರ ಮತ್ತು ಮನೆಗಳಲ್ಲಿನ ನೀರು ಶೇಖರಣಾ ತೊಟ್ಟಿಗಳು ಹಾಗೂ ಮೇಲ್ಭಾಗದ ತೊಟ್ಟಿಗಳಲ್ಲಿ ನೀರು ಹೊರಚೆಲ್ಲುವಿಕೆಯ ಮಾಹಿತಿಯನ್ನು ಅಧಿಕೃತವಾಗಿ ಮಂಡಳಿಗೆ ನೀಡುವ ಪ್ರಕ್ರಿಯೆಯಲ್ಲಿ ಸಾಕಷ್ಟು ಸುಧಾರಣೆಗಳ ಹಾಗೂ ಸಾರ್ವಜನಿಕರ ಸಹಭಾಗಿತ್ವದ ಅವಶ್ಯಕವಿರುತ್ತದೆ.

ಇದರಿಂದ ಸಾರ್ವಜನಿಕರ ಕುಂದು-ಕೊರತೆಗಳನ್ನು ನೇರವಾಗಿ ಪಡೆದುಕೊಳ್ಳಲು ಸಹಾಯವಾಗುತ್ತದೆ ಹಾಗೂ ಅವರುಗಳಿಗೆ ಮಂಡಳಿಯಿಂದ ಇನ್ನೂ ಉತ್ತಮವಾದ ಸೇವೆ ಕಲ್ಪಿಸಲು ಸಾಧ್ಯವಾಗುತ್ತದೆ.

ಈ ಮೇಲ್ಕಂಡ ಕೆಲಸ ಕಾರ್ಯಗಳನ್ನು ಸಾರ್ವಜನಿಕರ ಸಹಭಾಗಿತ್ವದ ತತ್ವದಡಿ ಕೈಗೊಳ್ಳಬೇಕಾದರೆ ಸ್ವಯಂಸೇವಕರ ಅವಶ್ಯಕವಿರುತ್ತದೆ. ಸದರಿ ಸ್ವಯಂಸೇವಕರನ್ನು "ಜಲಸೇನಾನಿ" ಎಂದು ಗುರುತಿಸಬಹುದಾಗಿದೆ.

ಈ ಎಲ್ಲಾ ಸದುದ್ದೇಶದಿಂದ ಸ್ವಯಂಸೇವಕರಾಗಿ "ಜಲಸೇನಾನಿ" ಗಳನ್ನು ಕೆಳಕಂಡ ಮಾನದಂಡದೊಂದಿಗೆ ನೇಮಿಸಿಕೊಳ್ಳಲು ಉದ್ದೇಶಿಸಲಾಗಿದೆ.

- ಈ ಸೇವೆಯು ಸಂಪೂರ್ಣವಾಗಿ ಸ್ವಇಚ್ಛೆಯಿಂದ ಒಪ್ಪಿತವಾಗಿ ಸಲ್ಲಿಸುವುದಾಗಿರಬೇಕು.

- 50 ವರ್ಷಗಳ ಒಳಗಿರಬೇಕು.
- ಸರ್ಕಾರಿ ಅಥವಾ ಅರೆಸರ್ಕಾರಿ ಉದ್ಯೋಗದಲ್ಲಿರಬೇಕು.
- ತಿಂಗಳಲ್ಲಿ 4 ದಿನ ಈ ಸೇವೆಗೆ ತಮ್ಮ ಸಮಯವನ್ನು ಮೀಸಲಿಡುವುದು.
- ಜಲಸೇನಾನಿಯಾಗಿ ನೊಂದಾಯಿಸಲು ಮಂಡಳಿಯ ವೆಬ್‌ಸೈಟ್ ಮುಖಾಂತರ ನೊಂದಾಯಿಸುವುದು.
- ನೊಂದಾಯಿಸಿದವರಿಗೆ ಮಂಡಳಿಯಿಂದ "ಜಲಸೇನಾನಿ" ಯಾಗಿ ಕಾರ್ಯನಿರ್ವಹಿಸಲು ಪತ್ರ ನೀಡಲಾಗುವುದು.
- ಯಾವುದೇ ಆರ್ಥಿಕ ಅನುದಾನದ ಸೌಲಭ್ಯವಿರುವುದಿಲ್ಲ.

ಆದ್ದರಿಂದ ಮೇಲ್ಕಂಡ ಅಂಶಗಳೊಂದಿಗೆ ಮಂಡಳಿಯಲ್ಲಿ ಸ್ವಯಂಸೇವಕರಾಗಿ "ಜಲಸೇನಾನಿ" ಯಾಗಿ ಕಾರ್ಯನಿರ್ವಹಿಸಲು ಅನುಬಂಧದಲ್ಲಿ ನೀಡಿರುವ ಅರ್ಜಿಯನ್ನು ಭರ್ತಿ ಮಾಡಿ ಸಲ್ಲಿಸಬೇಕು.

ಸದರಿ ವಿಷಯದ Soft copy ಯನ್ನು ಮಂಡಳಿಯ ವೆಬ್‌ಸೈಟ್ (www.bwssb.gov.in) ನಲ್ಲಿ ಅಪ್‌ಲೋಡ್ ಮಾಡಲು ಕೋರಲಾಗಿದೆ.

03/2/2020

ಮುಖ್ಯ ಆಡಳಿತಾಧಿಕಾರಿ ಹಾಗೂ ಕಾರ್ಯದರ್ಶಿ,
ಬೆಂಗಳೂರು ಜಲಮಂಡಳಿ

"ನೀರು ಉಳಿಸಿ – ಬೆಂಗಳೂರು ಉಳಿಸಿ"

ಭಾವಚಿತ್ರ

# ಅನುಬಂಧ

**"ಜಲಸೇನಾನಿ"** ಯಾಗಿ ಸೇವೆ ಮಾಡುವವರು ಈ ಕೆಳಕಂಡ ನಮೂನೆಯಲ್ಲಿ ಅರ್ಜಿಯನ್ನು ಭರ್ತಿಮಾಡಿ ಸಲ್ಲಿಸತಕ್ಕದ್ದು.

| | |
|---|---|
| **ಹೆಸರು ಮತ್ತು ವಿಳಾಸ** | |
| **ವಯಸ್ಸು** | |
| **ಸರ್ಕಾರಿ ಗುರುತಿನ ಚೀಟಿ/ಸರ್ಕಾರದ ಅಂಗ ಸಂಸ್ಥೆಗಳ ಗುರುತಿನ ಚೀಟಿಯ ವಿವರ** | |
| **ದೂರವಾಣಿ ಸಂಖ್ಯೆ :**<br>**ಮೊಬೈಲ್ ಸಂಖ್ಯೆ :**<br>**ಇ-ಮೇಲ್ ಐಡಿ :** | |
| **"ಜಲಸೇನಾನಿ"ಯಾಗಿ ಭಾಗವಹಿಸಲು ಪ್ರೇರಣೆ ಮತ್ತು ಆಸಕ್ತಿಯ ಬಗ್ಗೆ ಎರಡು ಸಾಲಿನ ಅಭಿಪ್ರಾಯ ನೀಡುವುದು.** | |
| **ತಿಂಗಳಲ್ಲಿ 4 ದಿನ "ಜಲಸೇನಾನಿ"ಯಾಗಿ ಕಾರ್ಯನಿರ್ವಹಿಸಲು ಸಿದ್ಧವಿರುವುದರ ಬಗ್ಗೆ ಅಭಿಪ್ರಾಯ ತಿಳಿಸುವುದು.** | |

ಮೇಲ್ಕಂಡ ಅಂಶಗಳನ್ನು ಸ್ವಪ್ರೇರಣೆಯಿಂದ ನೀಡಿರುತ್ತೇನೆ. "ಜಲಸೇನಾನಿ"ಯಾಗಿ ಯಾವುದೇ ಆರ್ಥಿಕ ಸೌಲಭ್ಯ ಪಡೆಯದೆ ಜಲಮಂಡಳಿಯ ಜೊತೆ ಸೇವೆ ಸಲ್ಲಿಸಲು ಒಪ್ಪುತ್ತೇನೆಂದು ದೃಢೀಕರಿಸುತ್ತೇನೆ.

(ಸಹಿ/-)

ದಿನಾಂಕ:

( ಹೆಸರು )